# <u>ದಿವಾಣಿ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ.</u>

**FDP No.08/2022**
**CW-2**

**ಹೆಸರು** : ಮಲ್ಲಿಕಾರ್ಜುನ ದಂಡಿನ
**ತಂದೆಯ ಹೆಸರು:** ಮಾಪಣ್ಣ
**ವಯಸ್ಸು** : 59 ವರ್ಷ
**ಉದ್ಯೋಗ** : ಸಹಾಯಕ ಕಾರ್ಯಕನಿರ್ವಾಹಕ ಅಭಿಯಂತರರು, ಕಾಳಗಿ.
**ವಾಸಸ್ಥಳ** : ಕಾಳಗಿ.

**ಪ್ರಮಾಣ ವಚನ ಭೋಧಿಸಲಾಯಿತು ದು: 19-10-2024**

**<u>ನ್ಯಾಯಾಲಯದ ಆಯುಕ್ತರ ಮುಖ್ಯ ವಿಚಾರಣೆ:</u>**

ನಾನು ಸಹಾಯಕ ಅಭಿಯಂತರನಾಗಿ ಸುಮಾರು 3 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಕಳೆದ 3 ತಿಂಗಳ ಹಿಂದೆ ಸಹಾಯಕ ಕಾರ್ಯನಿರ್ವಾನಕ ಅಭಿಯಂತರನಾಗಿ ಬಡ್ತಿ ಹೊಂದಿರುತ್ತೇನೆ.

ನಾನು ಈ ಪ್ರಕರಣದಲ್ಲಿ ನ್ಯಾಯಾಲಯದ ಆದೇಶದ ಪ್ರಕಾರ ಮಂಗಲಗಿ ಗ್ರಾಮದಲ್ಲಿರುವ ಪಂಚಾಯತಿ ಸಂಖ್ಯೆ: 1-82 ಹಾಗೂ 1-82/1 ಮನೆ ಹಾಗೂ ಖಾಲಿ ಜಾಗವನ್ನು ಅಳತೆ ಮಾಡಿ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿರುತ್ತೇನೆ. ನಾನು ಈ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ಅಳತೆ ಕಾರ್ಯ ಮಾಡುವುದಕ್ಕಿಂತ ಮುಂಚೆ ನೋಟಿಸನ್ನು ನೀಡಿರುತ್ತೇನೆ.

ಪ್ರತಿವಾದಿ ಮನೆಯಲ್ಲಿ ಇರದೇ ಇರುವ ಕಾರಣ, ಆತನ ಮನೆಯ ಮುಂದೆ ನೋಟಿಸ್ ನ ಪ್ರತಿಯನ್ನು ಅಂಟಿಸಿರುತ್ತೇನೆ.

ಸಾಕ್ಷಿಯು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಸಿ-5 ಎಂದು, ಸಾಕ್ಷಿಯು ಆಸ್ತಿ ಪಂಚಾಯತಿ ಸಂಖ್ಯೆ: 1-82ರ ಎರಡು ನಕ್ಷೆಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಶಾನೆ ಸಿ-6 ಮತ್ತು ನಿಶಾನೆ ಸಿ-7 ಎಂದು, ಸಾಕ್ಷಿಯು ಆಸ್ತಿ ಪಂಚಾಯತಿ ಸಂಖ್ಯೆ: 1-82/1ರ 2 ನಕ್ಷೆಗಳಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಶಾನೆ ಸಿ-8 ಮತ್ತು ನಿಶಾನೆ ಸಿ-9 ಎಂದು, ಸಾಕ್ಷಿಯು ಒಂದು ಫೋಟೊಗಳಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಎದುರುದಾರರ ಪರ ವಕೀಲರ ತಕರಾರಿಗೊಳಪಟ್ಟು ನಿಶಾನೆ ಸಿ-10, ಎಂದು ಗುರುತಿಸಲಾಯಿತು. ನಿಶಾನೆ ಸಿ-5 ರಿಂದ ನಿಶಾನೆ ಸಿ-10ರ

ದಾಖಲಾತಿಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಶಾನೆ ಸಿ-5(ಎ), ನಿಶಾನೆ ಸಿ-6(ಎ), ಸಿ-7(ಎ), ಸಿ-8(ಎ), ಸಿ-9(ಎ) ಮತ್ತು ನಿಶಾನೆ ಸಿ-10(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: 2ನೇ ಎದುರುದಾರರ ಪರ ವಕೀಲರಿಂದ :**

ನಾನು ದಿನಾಂಕ: 28-11-2023ರಂದು ಆಸ್ತಿ ಸಂಖ್ಯೆ: 1-82 ಮತ್ತು 1-82/1ರ ಅಳತೆ ಕಾರ್ಯವನ್ನು ಮಾಡಿರುತ್ತೇನೆ. ನಾನು ಅಳತೆ ಕಾರ್ಯ ಮಾಡುವುದಕ್ಕಿಂತ ಮುಂಚೆ ಸುಮಾರು 6 ದಿನಗಳ ಮುಂಚೆ ಎರಡೂ ಪಕ್ಷಗಾರರಿಗೆ ನೋಟಿಸನ್ನು ನೀಡಿರುತ್ತೇನೆ. ನಾನು ಸದರಿ ಆಸ್ತಿಗಳ ಆಳತೆ ಮಾಡಿದ ನಂತರ 2ನೇ ಎದುರುದಾರನ ಮನೆಗೆ ನೋಟಿಸನ್ನು ಹಚ್ಚಿರುತ್ತೇನೆ. ನಾನು ಅಳತೆ ಕಾರ್ಯ ಮಾಡಲು ಹೋದಾಗ, 2ನೇ ಎದುರುದಾರ ಅಶೋಕಕುಮಾರ ಈತನು ಆಸ್ತಿ ಸಂಖ್ಯೆ: 1-82ರಲ್ಲಿ ಇರಲಿಲ್ಲ.

ನಾನು 2ನೇ ಎದುರುದಾರನಿಗೆ ಅಳತೆ ಕಾರ್ಯ ಮಾಡುವುದಕ್ಕಿಂತ ಮುಂಚೆ ಯಾವುದೇ ನೋಟಿಸನ್ನು ಜಾರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಆಸ್ತಿ ಸಂಖ್ಯೆ 1-82ರ ಒಟ್ಟು ವಿಸ್ತೀರ್ಣದ ಅಳತೆ ಮಾಡಿರುವುದಿಲ್ಲ ಎಂದರೆ ಸರಿ. ಅದರಂತೆ ಆಸ್ತಿ ಸಂಖ್ಯೆ: 1-82/1ರ ಒಟ್ಟು ವಿಸ್ತೀರ್ಣ ಅಳತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಆಸ್ತಿ ಸಂಖ್ಯೆ: 1-82ರ ಭಾಗ-ಎ ಎಷ್ಟು ವಿಸ್ತೀರ್ಣ ಮತ್ತು ಭಾಗ-ಬಿ ಎಷ್ಟು ವಿಸ್ತೀರ್ಣ ಎಂದು ನಾನು ನಿಖರವಾಗಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.

ಆಸ್ತಿ ಸಂಖ್ಯೆ: 1-82/1ರ ಭಾಗ-ಎ ಎಷ್ಟು ವಿಸ್ತೀರ್ಣ ಮತ್ತು ಭಾಗ-ಬಿ ಎಷ್ಟು ವಿಸ್ತೀರ್ಣ ಎಂದು ನಿಖರವಾಗಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಅಳತೆ ಕಾರ್ಯವನ್ನು ಸರಿಯಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಸಿ-6 ರಿಂದ ನಿಶಾನೆ ಸಿ-9ರ ವರೆಗಿನ ನಕ್ಷೆಗಳನ್ನು ಅವೈಜ್ಞಾನಿಕವಾಗಿ ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಅಳತೆ ಕಾರ್ಯವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಅನುಕೂಲವಾಗುವಂತೆ ಸುಳ್ಳು ನ್ಯಾಯಾಲಯದ ಆಯುಕ್ತರ ವರದಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದ ಡಿಕ್ರಿಯನ್ನು ನೋಡದೇ ನನ್ನ ಮನಸ್ಸಿಗೆ ಬಂದಂತೆ ಒಂದು ಅಳತೆ ಕಾರ್ಯವನ್ನು ಪೂರೈಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಅವೈಜ್ಞಾನಿಕವಾಗಿ ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಒಂದು ಸುಳ್ಳು ವರದಿಯನ್ನು ಮತ್ತು ನಕ್ಷೆಗಳನ್ನು ತಯ್ಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** **ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.